ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 12–11–2020

# ಮಾಧ್ಯಮ ಆಮಂತ್ರಣ

**1. ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಮಾದರಿ ಪಾರಂಪರಿಕ ಗ್ರಾಮದ ಉದ್ಘಾಟನಾ ಸಮಾರಂಭ :**

**ಉದ್ಘಾಟನೆ:**

**ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು**

**ದಿನಾಂಕ : 13–11–2020, ಶುಕ್ರವಾರ, ಸಮಯ: ಅಪರಾಹ್ನ 12–30 ಗಂಟೆಗೆ**

**ಸ್ಥಳ : ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣ, ಶ್ರೀರಾಂಪುರ ಕ್ರಾಸ್, ಜಕ್ಕೂರು, ಬೆಂಗಳೂರು –560 064**

***ವಿ. ಸೂ. : ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದೆ. ಅಂದು ವಾಹನವು ಬೆಳಿಗ್ಗೆ 10–30 ಗಂಟೆಗೆ ವಾರ್ತಾ ಸೌಧ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೇಂದ್ರ ಕಚೇರಿ, ಇನ್‌ಫ್ಯಾಂಟ್ರಿ ರಸ್ತೆಯಿಂದ ತೆರಳಲಿದೆ. ಹೆಚ್ಚಿನ ಮಾಹಿತಿಗಾಗಿ :***

**ಸಂಪರ್ಕ : ರಾಕೇಶ್ 7760558764**

# ಪತ್ರಿಕಾ ಪ್ರಕಟಣೆ

## ನವೆಂಬರ್ 14 ರಂದು ಮುಖ್ಯಮಂತ್ರಿಗಳಿಂದ

## 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನೆ

**ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ) :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದ ಉದ್ಘಾಟನೆ ಮತ್ತು ಸಹಕಾರ ರತ್ನ ಪ್ರಶಸ್ತಿ ಪ್ರದಾನವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನವೆಂಬರ್ 14 ರಂದು ಬೆಳಿಗ್ಗೆ 10.00 ಗಂಟೆಗೆ ಬೆಂಗಳೂರು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾಡುವರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿವಾಜಿನಗರ ವಿಧಾನಸಭಾ ಕ್ಷೇತ್ರ ಶಾಸಕರಾದ ರಿಜ್ವಾನ್ ಹರ್ಷದ್ ವಹಿಸುವರು. ರಾಜ್ಯ ಮತ್ತು ಕೇಂದ್ರದ ಸಚಿವರುಗಳು, ರಾಜ್ಯಸಭಾ, ವಿಧಾನಸಭಾ,ವಿಧಾನಪರಿಷತ್ ಸದಸ್ಯರುಗಳು ಹಾಗೂ ಸಹಕಾರಿ ಗಣ್ಯರು ಭಾಗವಹಿಸುವರು.

## ಆ್ಯಪ್ ಮೂಲಕ ವಾಹನಗಳ ಆರ್‌ಸಿ ಎಕ್ಸ್‌ಟ್ರಾಕ್ ಪಡೆಯುವ ಸೇವೆಗೆ ಚಾಲನೆ

**ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ) :** ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳ ಪೋರ್ಟಲ್-ಕರ್ನಾಟಕ ಮೊಬೈಲ್ ಒನ್ ಆ್ಯಪ್ ಮೂಲಕ ವಾಹನಗಳ ಆರ್‌ಸಿ ಎಕ್ಸ್‌ಟ್ರಾಕ್ ಪಡೆಯುವ ಸೇವೆಗೆ ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯು ಚಾಲನೆ ನೀಡಿದೆ.

ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯು ಇ.ಡಿ.ಸಿ.ಎಸ್ ನಿರ್ದೇಶನಾಲಯ, ಡಿ.ಪಿ.ಎ.ಆರ್.(ಇ-ಗವರ್ನೆನ್ಸ್) ಸಹಯೋಗದೊಂದಿಗೆ ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳ ಪೋರ್ಟಲ್ (www.karnatakaone.gov.in ) ಕರ್ನಾಟಕ ಮೊಬೈಲ್ ಒನ್ ಆ್ಯಪ್ ಮೂಲಕ ವಾಹನಗಳ ಆರ್‌ಸಿ ಎಕ್ಸ್‌ಟ್ರಾಕ್ಟ್ ವಿತರಣೆಯ ಸೇವೆಯನ್ನು ಪುನ: ಪ್ರಾರಂಭಿಸಿದೆ.

ಬೆಂಗಳೂರಿನಲ್ಲಿ 196 ಬೆಂಗಳೂರು ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 26 ನಗರಗಳಲ್ಲಿ 82 ಕರ್ನಾಟಕ ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಆರ್.ಸಿ ಎಕ್ಸ್‌ಟ್ರಾಕ್ಟ್‌ಗೆ ರೂ.18 ಪಾವತಿಸುವ ಮೂಲಕ ನಾಗರೀಕರು ವಾಹನಗಳ ಆರ್‌ಸಿ ಎಕ್ಸ್‌ಟ್ರಾಕ್ಟ್ ಪಡೆಯಬಹುದು. ಡೆಬಿಟ್‌ಕಾರ್ಡ್, ಕ್ರೆಡಿಟ್‌ಕಾರ್ಡ್, ಇಂಟರ್ನೆಟ್ ಬ್ಯಾಂಕಿಂಗ್ ಹಾಗೂ ಪೇಟಿಎಂ ಬಳಕೆ ಮಾಡಿದ್ದಲ್ಲಿ ಹೆಚ್ಚುವರಿ ಶುಲ್ಕಗಳು ಅನ್ವಯವಾಗುತ್ತವೆ.

ಅರ್ಜಿದಾರರು ಬೆಂಗಳೂರು ಒನ್/ಕರ್ನಾಟಕ ಒನ್ ಕೇಂದ್ರಗಳು ಅಥವಾ ಪೋರ್ಟಲ್ (**www.karnatakaone.gov.in** ) ಕರ್ನಾಟಕ ಮೊಬೈಲ್ ಒನ್ ಆ್ಯಪ್ ಆರ್‌ಸಿ ಎಕ್ಸ್‌ಟ್ರಾಕ್ಟ್ ಪಡೆಯಲು ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಒದಗಿಸಬೇಕಾಗುತ್ತದೆ.

ಹೆಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ಬೆಂಗಳೂರು ಒನ್/ಕರ್ನಾಟಕ ಒನ್ ಕೇಂದ್ರಗಳನ್ನು ಸಂಪರ್ಕಿಸಿ ಅಥವಾ ಕರ್ನಾಟಕ ಒನ್ ಪೋರ್ಟಲ್ (**www.karnatakaone.gov.in** ) ಗೆ ಭೇಟಿ ಮಾಡಿ ಕರ್ನಾಟಕ ಮೊಬೈಲ್ ಒನ್ ಆ್ಯಪ್‌ನ್ನು ಡೋನ್ ಲೋಡ್ ಮಾಡಿ.

## Avail RC Extract of Vehicles through Bangalore One-Karnataka One Centers,Potal/Karnataka Mobile One app

Bangalore , November 12 (Karnataka Information): Transport Department, Government of Karnataka in collaboration with Directorate of EDCS, DPAR(e-Goernance)has re-launched the servie of issue of RC Extract (B Extract) of vehicles throug Bangaore One/Karnataka One/ centres and through Karnataka One Portal (www.karnatakaone.gov.in) karnataka Mobile One app.

196 Bangalore One centres are set up in Bangalore and 82 Karnataka One centres have been set up in 26 cities. Citizens can avail the get the RC Extract of vehiles by making payment of Rs.18/-per extract.

Applicant needs to provide name, address and mobile number to obtain the RC Extract from Bangalore One/Kanataka One Centres or Portal/Karnataka Mobile One App.Portal/Karnataka Mobile One app for Debt Card /Credit card/Net Banking and Paytm additonal charges shall be applicable.

For more informaton contact your nearest Bangalore One/Karnataka One centeres of log on to Karnataka One Portal (www.karnatakaone.gov.in/download Karnataka Mobile One app(android and IOS versions) says official press release.

## ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಯಲ್ಲಿ ಅರ್ಜಿ ಆಹ್ವಾನ

**ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ) :**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮದಿಂದ ಪ್ರತಿ ವರ್ಷದಂತೆ 2020-21ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಸಾಲ ಸೌಲಭ್ಯ ಪಡೆಯಲು ಮತೀಯ ಅಲ್ಪಸಂಖ್ಯಾತರಿಂದ ಮುಸ್ಲಿಂ, ಕ್ರಿಶ್ಚಿಯನ್, ಜೈನರು, ಭೌದ್ಧರು, ಸಿಖ್ಖರು, ಪಾರ್ಸಿಗಳು ಜನಾಂಗದವರಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿದೆ.

ಮೈಕ್ರೋ ಸಾಲ ವೈಯಕ್ತಿಕ ಯೋಜನೆ (ಮಹಿಳೆಯರಿಗೆ ಮಾತ್ರ)

ಮೇಲ್ಕಂಡ ಯೋಜನೆಯಡಿ ಸಾಲ ಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆಗಳು ಮತ್ತು ಮಾನದಂಡ ಈ ಕೆಳಕಂಡತಿದೆ.

ಅರ್ಜಿದಾರರು ಬೆಂಗಳೂರು ನಗರದಲ್ಲಿ ಕನಿಷ್ಠ 15 ವರ್ಷದಿಂದ ಖಾಯಂ ನಿವಾಸಿಯಾಗಿರಬೇಕು._ವಯಸ್ಸು ಕನಿಷ್ಠ 18 ವರ್ಷಗಳು ಮತ್ತು ಗರಿಷ್ಠ 50 ವರ್ಷಗಳು._ತಮ್ಮ ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಗುರುತಿನ ಚೀಟಿ, ಬ್ಯಾಂಕ್ ಖಾತೆ ಪುಸ್ತಕ ಪ್ರತಿ (ಹೆಸರು, ಖಾತೆ ಸಂಖ್ಯೆ, ಫೋಟೋ, ಬ್ಯಾಂಕಿನ ವ್ಯವಸಾಪಕರ ಸಹಿ ಇರುವ ಪುಟ ಮತ್ತು ಇತ್ತೀಚಿನ ಎರಡು ತಿಂಗಳ ವ್ಯವಹಾರ ಶಿಲ್ಕು ತೋರಿಸುವ ಪುಟಗಳ ಜೆರಾಕ್ಸ್)._ಅರ್ಜಿದಾರರು ತಮ್ಮ ಅರ್ಜಿ ಮತ್ತು ದಾಖಲಾತಿಗಳನ್ನು ದ್ವಿ ಪ್ರತಿ ಸಲ್ಲಿಸಬೇಕು.ಈ ಹಿಂದೆ ನಿಗಮದ ಸೌಲಭ್ಯವನ್ನು ಪಡೆದವರು ಮತ್ತು ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ._ಕಡ್ಡಾಯವಾಗಿ ಬಿಪಿಎಲ್‌ಕಾರ್ಡ್/ಅಂತ್ಯೋದಯ ಕಾರ್ಡ್ ಹೊಂದಿರಬೇಕು.

**kmdcmicro.karnataka.gov.in** ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:10/12/2020 ನಿಗದಿಯಾಗಿದ್ದು, ಅರ್ಜಿಯ ಪ್ರತಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ನಿಗಮದ ಕಛೇರಿಗೆ ದಿನಾಂಕ:21/12/2020 ರೊಳಗಾಗಿ ಸಲ್ಲಿಸಬೇಕಾಗಿರುತ್ತದೆ, ತದನಂತರ ಬಂದ ಅರ್ಜಿಗಳನ್ನು ಸ್ವೀಕರಲಾಗುವುದಿಲ್ಲ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮದಿಂದ ಪ್ರತಿ ವರ್ಷದಂತೆ 2020-21ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಕೆಳಕಂಡ ಯೋಜನೆಗಳಲ್ಲಿ ಸಾಲ ಸೌಲಭ್ಯ ಪಡೆಯಲು ಮತೀಯ ಅಲ್ಪಸಂಖ್ಯಾತರಿಂದ ಅಂದರೆ ಮುಸ್ಲಿಂ, ಕ್ರಿಶ್ಚಿಯನ್, ಜೈನರು, ಭೌದ್ಧರು, ಸಿಖ್ಖರು, ಪಾರ್ಸಿಗಳು ಜನಾಂಗದವರಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿದೆ.

1. ಶ್ರಮಶಕ್ತಿ ಸಾಲದ ಯೋಜನೆ,
2. ಮೈಕ್ರೋ (ಸಂಘ)ಸಾಲ ಸಹಾಯಧನ ಯೋಜನೆ.
3. ವೃತ್ತಿ ಪ್ರೋತ್ಸಾಹ ಯೋಜನೆ
4. ಟ್ಯಾಕ್ಸಿ/ಗೂಡ್ಸ್ ಖರೀದಿ ಯೋಜನೆ.
5. ಮನೆ ಮಾಳಿಗೆ ಯೋಜನೆ

**ಮೇಲ್ಕಂಡ ಯೋಜನೆಯಡಿ ಸಾಲ ಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆಗಳು ಮತ್ತು ಮಾನದಂಡ ಈ ಕೆಳಕಂಡತಿದೆ.**

- ಅರ್ಜಿದಾರರು ಬೆಂಗಳೂರು ನಗರದಲ್ಲಿ ಕನಿಷ್ಠ 15 ವರ್ಷದಿಂದ ಖಾಯಂ ನಿವಾಸಿಯಾಗಿರಬೇಕು.
- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಗ್ರಾಮಾಂತರ ಪ್ರದೇಶದ ವರಿಗೆ ರೂ.81,000/- ಮತ್ತು ನಗರ ಪ್ರದೇಶದವರಿಗೆ ರೂ.1,03,000/-ಕ್ಕೆ ಮೀರಬಾರದು.
- ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಮತ್ತು ಗರಿಷ್ಠ 55 ವರ್ಷಗಳು, ವೃತ್ತಿ ಪ್ರೋತ್ಸಾಹ ಮತ್ತು ಟ್ಯಾಕ್ಸಿ/ಗೂಡ್ಸ್ ಯೋಜನೆ ಯವರಿಗೆ 18 ರಿಂದ 45 ವರ್ಷಗಳು.
- ಶೇ.33ರಷ್ಟು ಮಹಿಳೆಯರಿಗೆ ಮೀಸಲಾತಿ ಇರುತ್ತದೆ, ಶೇ.3 ರಷ್ಟು ಅಂಗವಿಕಲರಿಗೆ ಮೀಸಲಾತಿ ಇರುತ್ತದೆ.
- ಅರ್ಜಿದಾರರು ತಮ್ಮ ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಗುರುತಿನ ಚೀಟಿ, ಬ್ಯಾಂಕ್ ಖಾತೆ ಪುಸ್ತಕ ಪ್ರತಿ (ಹೆಸರು, ಖಾತೆ ಸಂಖ್ಯೆ, ಫೋಟೋ, ಬ್ಯಾಂಕಿನ ವ್ಯವಸಾಪಕರ ಸಹಿ ಇರುವ ಪುಟ ಮತ್ತು ಇತ್ತೀಚಿನ ಎರಡು ತಿಂಗಳ ವ್ಯವಹಾರ ಶಿಲ್ಕು ತೋರಿಸುವ ಪುಟಗಳ ಜೆರಾಕ್ಸ್)ಯೋಜನಾ ವರದಿ ಹಾಗೂ ಅರ್ಜಿದಾರರ ಹಾಗೂ ಜಾಮೀನುದಾರರ 2 ಭಾವಚಿತ್ರ.
- ಈ ಹಿಂದೆ ನಿಗಮದ ಸೌಲಭ್ಯವನ್ನು ಪಡೆದವರು ಮತ್ತು ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
- ಅರ್ಜಿದಾರರು ಕಡ್ಡಾಯವಾಗಿ IFSC ಕೋಡ್ ಇರುವ ಬ್ಯಾಂಕ್ ಖಾತೆ ಪಾಸ್ ಬುಕ್ ಪ್ರತಿಯನ್ನು ಸಲ್ಲಿಸಬೇಕು.

**kmdc.kar.nic.in/loan/login.aspx** ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:10/12/2020 ನಿಗದಿಯಾಗಿದ್ದು, ಅರ್ಜಿಯ ಪ್ರತಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ನಿಗಮದ ಕಛೇರಿಗೆ ದಿನಾಂಕ:21/12/2020 ರೊಳಗಾಗಿ ಸಲ್ಲಿಸಬೇಕಾಗಿರುತ್ತದೆ, ತದನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

## ತಮಿಳುನಾಡಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ಸೇವೆ ಪ್ರಾರಂಭ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ) :

ಕೋವಿಡ್-19 ಹಾಗೂ ಲಾಕ್‌ಡೌನ್ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಅಂತರರಾಜ್ಯ ಸಾರಿಗೆಗಳ ಕಾರ್ಯಾಚರಣೆಯನ್ನು ಸ್ಥಗಿತ ಗೊಳಿಸಿರುತ್ತದೆ. ಕೋವಿಡ್-19ನ ಲಾಕ್‌ಡೌನ್ ಸಡಿಲ ಗೊಂಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ದಿನಾಂಕ11.11.2020 ರಿಂದ 16.11.2020ರವರೆಗೆ ಕರ್ನಾಟಕ ರಾಜ್ಯದ ವಿವಿಧ ಸ್ಥಳಗಳಿಂದ ತಮಿಳುನಾಡು ರಾಜ್ಯದ ವಿವಿಧ ಸ್ಥಳಗಳಿಗೆ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ವಿಶೇಷ ಸಾರಿಗೆಗಳ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗುತ್ತಿದೆ.

ಎಲ್ಲಾ ಪ್ರಯಾಣಿಕರು ಕಡ್ಡಾಯವಾಗಿ ಮಾಸ್ಕ್‌ಧರಿಸಬೇಕಾಗಿರುತ್ತದೆ. ಮುಂಗಡ ಆಸನಗಳನ್ನು www.ksrtc.inವೆಬ್‌ಸೈಟ್ ಮತ್ತು ನಿಗಮದ/ಫ್ರಾಂಚೈಸಿ ಕೌಂಟರ್‌ಗಳ ಮುಖಾಂತರ ಕಾಯ್ದಿರಿಸಿಕೊಳ್ಳಬಹುದಾಗಿದೆ. ಪ್ರಯಾಣಿಕರು ಸದರಿ ಸೌಲಭ್ಯದ ಸದುಪಯೋಗ ಪಡೆಯಲು ಅಧಿಕೃತ ಪ್ರಕಟಣೆ ತಿಳಿಸಿದೆ.

## KSRTC resume bus service to Tamilnadu

Bangalore, November 12 (Karnataka Information): Karnataka State Road Transport Corporation had stopped operation of inter-state bus services due to Covid-19 and Lockdown. As lockdown has been relaxed, KSRTC will operate special services from different places of Karnataka state to various places of Tamilnadu State from11.11.2020 to 16.11.2020. The services will be operated keeping in view the density of passengers. It is mandatory for all passengers to wear mask. Passengers can book tickets in advance online at www.ksrtc.inor through KSRTC/Franchisee advance reservation counters. The passengers are requested to avail the above facilities says official press release.

## Inauguration of the Child Beggary Rescue Campaign "A Firm Step Towards Eradicating Child Beggary" by Karnataka State Commission for Protection of Child Rights

The Karnataka State Commission for Protection of Child Rights has been created to safeguard the rights of children with the right to conduct enquires on the complaints received and also has the power of a Civil Court while enquiring into cases related to child rights violations. The Commission can receive complaints and take suitable action on cases related to infringement/violation of child rights and it can also take action by registering complaints Suo-Moto.

The Commission has initiated a project with the intention to reach out and rehabilitate children who are involved in begging throughout the City of Bangalore. The Special Juvenile Police Units and the Non-Governmental Organisations were assigned to work throughout the city of Bangalore by dividing the city into 8 zones.

The new program “A firm step towards eradicating Child Beggary” is instituted with the combined efforts of the Judiciary, Law Enforcement Agencies and Non-Governmental Organisations committedly working towards the comprehensive development of Children in Need of Care and Protection over a period of one year.

The Commission in collaboration with the Karnataka State Legal Service Authority, Karnataka State Police Department, Integrated Child Protection Scheme, UNICEF and Non-Governmental Organisations has scheduled the launch of this new program on 12 November, 2020 at 10:30 a.m in the premises of the Town Hall wherein a public announcement to create awareness on the eradication of child beggary to be announced in every traffic signal will be launched through an awareness rally of the Police, NGO’S and other representatives from Town Hall to Vidhan Soudha and back. Eminent persons Actor and Director Master Kishan and META National Award Winner Mr. Dingri Naresh, who have received various recognitions for their work in art and Mr. Shanthappa who has worked for educating migrant children will be felicitated at the event. The continued implementation of the program will happen through various activities such as awareness creation, raid and rescue and ensure long and sustainable rehabilitation of children who resort to begging for their survival. This program is a step towards ensuring that people extend their support to children not by giving them alms but a fruitful childhood.

## ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ): ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರು ನವೆಂಬರ್ 13 ರಂದು ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರ ಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕೃಷಿ ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ): ಕೃಷಿ ಸಚಿವ ಬಿ. ಸಿ. ಪಾಟೀಲ್ ಅವರು ನವೆಂಬರ್ 13 ರಿಂದ 14 ರವರೆಗೆ ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ನವೆಂಬರ್ 14 ರಂದು ಕೇಂದ್ರ ಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕೆ.ಎಸ್.ಟಿ.ಡಿ.ಸಿ. ಯಿಂದ ತಿರುಪತಿ, ಕೊಲ್ಲೂರು, ಧರ್ಮಸ್ಥಳ, ಹಂಪೆ ಪ್ರತಿದಿನ ಬಸ್ ಸೇವೆ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ರಾಜ್ಯದ ಪ್ರವಾಸಿಗರಿಗೆ ಹಾಗೂ ಯಾತಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರಾಜ್ಯದ ಈ ಕೆಳಗಿನ ಧಾರ್ಮಿಕ ಸ್ಥಳಗಳಿಗೆ ರಾತ್ರಿ ಸಾರಿಗೆಗಳನ್ನು (Point to Point Operation) ಕಾರ್ಯಾಚರಣೆ ಮಾಡಲು ನಿರ್ಧರಿಸಲಾಗಿದ್ದು, ಸುಸ್ಸಜ್ಜಿತ ಎ.ಸಿ ಡಿಲೆಕ್ಸ್ ವಾಹನಗಳಲ್ಲಿ ಪ್ರತಿದಿನ ರಾತ್ರಿ ಬೆಂಗಳೂರಿನಿಂದ ಈ ಕೂಡಲೇ ಜಾರಿಯಲ್ಲಿ ಬರುವಂತೆ ಕಾರ್ಯಾಚರಣೆಗೆ ಕ್ರಮಕೈಗೊಳ್ಳಲಾಗಿದೆ.

| ಧಾರ್ಮಿಕ ಸ್ಥಳಗಳ ವಿವರ | ಏಕಮುಖ ಪ್ರಯಾಣ ದರ | ಬೆಂಗಳೂರಿನಿಂದ ಹೊರಡುವ | ಯಾತ್ರಾ ಸ್ಥಳಗಳಿಂದ |
|---|---|---|---|
| 1. ಬೆಂಗಳೂರು – ತಿರುಪತಿ | 400.00 | ರಾತ್ರಿ 9.00 | ರಾತ್ರಿ 10.00 |
| 2. ಬೆಂಗಳೂರು – ಕೊಲ್ಲೂರು | 500.00 | ರಾತ್ರಿ 9.00 | ರಾತ್ರಿ 9.00 |
| 3. ಬೆಂಗಳೂರು – ಧರ್ಮಸ್ಥಳ | 400.00 | ರಾತ್ರಿ 10.00 ಗಂಟೆ | ರಾತ್ರಿ 10.00 ಗಂಟೆ |
| 4. ಬೆಂಗಳೂರು – ಹಂಪಿ (ಹೊಸಪೇಟೆ) | 500.00 | ರಾತ್ರಿ 10.00 ಗಂಟೆ | ರಾತ್ರಿ 10.00 ಗಂಟೆ |

ನಿಗಮವು ಕೋವಿಡ್–19 ಸಂಬಂಧದ ಸುರಕ್ಷಾ ಮುಂಜಾಗೃತ ಕ್ರಮಗಳನ್ನು ಕೈಗೊಂಡಿರುತ್ತದೆ. ಪ್ರವಾಸಗಳ ವಾಹನಗಳನ್ನು ಪ್ರತಿದಿನ ಸ್ಯಾನಿಟೈಸ್ ಮಾಡಲಾಗುವುದು, ಪ್ರವಾಸಕ್ಕೆ ನಿಯೋಜಿಸುವ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಪ್ರತಿ ದಿನ ಥರ್ಮಲ್ ಸ್ಕ್ರೀನಿಂಗ್, ಮಾಸ್ಕ್, ಸ್ಯಾನಿಟೈಸರ್ ಬಳಸಲು ಸೂಚಿಸಲಾಗಿದೆ ಹಾಗೂ ಪ್ರವಾಸಗಳ ಸಂದರ್ಭದಲ್ಲಿ ಪ್ರವಾಸಿಗರು ಸಾಮಾಜಿಕ ಅಂತರ ಕಾಪಾಡುವುದು ಹಾಗೂ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಈ ಸೇವೆಗಳ ಸದುಪಯೋಗ ಪಡೆಯಲಿಚ್ಛಿಸುವ ಪ್ರವಾಸಿಗರು ನಿಗಮದ ಬುಕ್ಕಿಂಗ್ ಕೌಂಟರ್‌ಗಳಾದ ಯಶವಂತಪುರ ಕೇಂದ್ರ ಕಛೇರಿ ಬುಕ್ಕಿಂಗ್ ಕೌಂಟರ್, ಕೆಂಪೇಗೌಡ ಬುಕ್ಕಿಂಗ್ ಕೇಂದ್ರ ಹಾಗೂ ರೆಡ್‌ಬಸ್ ಪೋರ್ಟಲ್ ಮುಖಾಂತರ ಮುಂಗಡ ಬುಕ್ಕಿಂಗ್ ಮಾಡಬಹುದಾಗಿರುತ್ತದೆ. ಅಲ್ಲದೆ, ನಿಗಮದ ಅಧಿಕೃತ ಟ್ರಾವೆಲ್ ಏಜೆಂಟ್ ಮುಖಾಂತರ ಬುಕ್ಕಿಂಗ್ ಮಾಡಬಹುದಾಗಿದ್ದು, ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆಯಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ದೂರವಾಣಿಗಳನ್ನು ಸಂಪರ್ಕಿಸಬಹುದಾಗಿದೆ.

ಆನ್‌ಲೈನ್ ಬುಕ್ಕಿಂಗ್ : www.kstdc.co
ದೂರವಾಣಿ ಸಂಖ್ಯೆ : 080–4334 4334/35,
+91 8970650070/ +91 8970650075

## "ವಿಶ್ವ ಆಯುರ್ವೇದ ದಿನ" ಉಚಿತ ಆರೋಗ್ಯ ತಪಾಸಣೆ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ):

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆ, ಬೆಂಗಳೂರು ಇವರ ವತಿಯಿಂದ "ವಿಶ್ವ ಆಯುರ್ವೇದ ದಿನ" ದ ಅಂಗವಾಗಿ ಪ್ರಸ್ತುತ ದಿನಮಾನ ಕಾಲದಲ್ಲಿ ಅತಿ ಹೆಚ್ಚು ಜನರನ್ನು ಭಾದಿಸುತ್ತಿರುವ ಖಾಯಿಲೆಗಳಾದ ಮಧುಮೇಹ, ಸಂದಿವಾತ ಮತ್ತು ಪಿಸಿಓಡಿ ಸಮಸ್ಯೆಗಳಿಗೆ ನುರಿತ ತಜ್ಞ ವೈದ್ಯರುಗಳಿಂದ ಉಚಿತವಾಗಿ ಆರೋಗ್ಯ ತಪಾಸಣೆ, ರಕ್ತ ಪರೀಕಷೆ ಮೂತ್ರ ಪರೀಕ್ಷೆ ಮತ್ತು ಉಚಿತವಾಗಿ ಔಷಧ ವಿತರಣ ಶಿಬಿರಗಳನ್ನು ದಿನಾಂಕ 01-11-2020 ರಿಂದ 30-11-2020 ರವರೆಗೆ, ಬೆಳಿಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 1-00 ಗಂಟೆಯವರೆಗೆ ಈ ಆಸ್ಪತ್ರೆಯ ಹೊರರೋಗಿ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ ಪ್ರಾಚಾರ್ಯರ ಕಚೇರಿ ಸಂಖ್ಯೆ 080-22872848 ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

## ದೀಪಾವಳಿ ಶುಭಾಶಯ

**ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ):**

ಕರ್ನಾಟಕ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ನಾಡಿನ ಜನತೆಗೆ ದೀಪಾವಳಿ ಶುಭಾಶಯ ತಿಳಿಸುತ್ತಾ ಮಾನವತೆಯ ಹಣತೆಯಲ್ಲಿ ಸಂಕಷ್ಟವು ಕರಗಲಿ ಸರ್ವರ ಬಾಳು ಸಂತಸದಿ ಬೆಳಗಲಿ ಎಂದು ದೀಪಾವಳಿ ಶುಭಾಶಯ ತಿಳಿಸಿದ್ದಾರೆ.

## ರೈತರೊಂದಿಗೆ ಒಂದು ದಿನ

**ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ):**

ರೈತರೊಂದಿಗೆ ಒಂದು ದಿನವನ್ನು ಅವರ ದೈನಂದಿನ ಕೃಷಿ ಚಟುವಟಿಕೆಗಳಲ್ಲಿ ಸ್ವತ: ಬಾಗಿಯಾಗಿ ಅವರ ಸಮಸ್ಯೆಗಳನ್ನು ಹಾಗೂ ಬೇಡಿಕೆಗಳನ್ನು ಆಲಿಸಲು "ರೈತರೊಂದಿಗೊಂದು ದಿನ"

ಎಂಬ ವಿನೂತನ ಕಾರ್ಯಕ್ರಮವನ್ನು ತಮ್ಮ ಹುಟ್ಟು ಹಬ್ಬದ ದಿನ ನವೆಂಬರ್ 14 ರಿಂದ ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರು ಇಂದು ನಡೆದ ವಿಕಾಸಸೌಧದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ ಏಪ್ರಿಲ್ 1 ರಿಂದ ರೈತ ವಾಸ್ತವ್ಯ ಮಾಡಬೇಕಾಗಿತ್ತು ಕೋವಿಡ್ 19 ಹಿನ್ನಲೆಯಲ್ಲಿ ವಾಸ್ತವ್ಯ ಮುಂದೂಡಲಾಯಿತು. " ರೈತರೊಂದಿಗೊಂದು ದಿನ" ಕಾರ್ಯಕ್ರಮವನ್ನು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಮಡುವಿನಕೋಡಿ ಗ್ರಾಮದಿಂದ ಪ್ರಾರಂಭಿಸಿ, ಕಾರ್ಯಕ್ರಮವನ್ನು ನಿರಂತರವಾಗಿ ಪ್ರತಿ ಜಿಲ್ಲೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ.

13ನೇ ನವೆಂಬರ್ 2020ರಂದು ಶುಕ್ರವಾರ ಸಾಯಂಕಾಲ ಮಾಜಿ ಲೋಕಸಭಾ ಸದಸ್ಯರು ಹಾಗೂ ಕಾವೇರಿ ಹಿತ ರಕ್ಷಣಾ ಸಮಿತಿಯ ಅಧ್ಯಕ್ಷರಾದ ಜಿ. ಮಾದೇಗೌಡ ಇವರ ನಿವಾಸಕ್ಕೆ ಭೇಟಿ ನೀಡಿ ಸನ್ಮಾನಿಸಿ ಅವರ ಅನುಭವವನ್ನು ಹಂಚಿಕೊಳ್ಳತ್ತೇನೆ. 14ನೇ ನವೆಂಬರ್ 2020ರಂದು ಶನಿವಾರ ಸಮಗ್ರ ಕೃಷಿ ಪದ್ದತಿಯನ್ನು ಅಳವಡಿಸಿ ಆಧುನಿಕ ಕೃಷಿ ಮಾಡುತ್ತಿರುವ ಕೆ.ಆರ್.ಪೇಟೆ ತಾಲ್ಲೂಕಿನ ಹೊಸಕೋಟೆ ಗ್ರಾಮದ ಶ್ರೀಮತಿ ಲಕ್ಷ್ಮೀದೇವಮ್ಮ ಹಾಗೂ ದೊಡ್ಡಯಾಚೇನಹಳ್ಳಿ ಗ್ರಾಮದ ಮೋಹನ್ ಇವರುಗಳ ತಾಲ್ಲೂಕಿಗೆ ಭೇಟಿ ನೀಡಿ ಅವರು ಕೈಗೊಂಡಿರುವ ಕೃಷಿ ಚಟುವಟಿಕೆಗಳನ್ನು ವೀಕ್ಷಿಸುವೆ ಎಂದು ಹೇಳಿದರು.

" ರೈತರೊಂದಿಗೊಂದು ದಿನ" ವಿನೂತನ ಕಾರ್ಯಕ್ರಮವನ್ನು ನವೆಂಬರ್ 14 ರಿಂದ ಮಂಡ್ಯ ಜಿಲ್ಲೆಯಿಂದ ಪ್ರಾರಂಭಿಸುತ್ತಿದ್ದೇನೆ. ಮಂಡ್ಯ ಜಿಲ್ಲೆಯಲ್ಲಿ ಪ್ರಗತಿಪರ ರೈತರಿಗೆ ಆತ್ಮಸ್ಥೈರ್ಯ ತುಂಬುವುದು, ಸಮಗ್ರ ಕೃಷಿ, ಕೃಷಿ ರೈತೋದ್ಯಮ, ಬೇಸಾಯ ವೆಚ್ಚ ಕಡಿಗೊಳಿಸಿ, ರೈತರ ಆದಾಯ ಹೆಚ್ಚಿಸುವುದರಲ್ಲಿ ಅರಿವು ಮೂಡಿಸುವುದು ಹಾಗೂ ರೈತರ ಆತ್ಮಹತ್ಯೆಗೆ ಕಾರಣವನ್ನು ಮೂಲವಾಗಿ ಅರಿತು ರೈತರ ಮನೋಬಲವನ್ನು ವೃದ್ಧಿಸಿ ಆತ್ಮಹತ್ಯೆಯನ್ನು ತಡೆಗಟ್ಟಲು ಸೂಕ್ತ ಕ್ರಮಕೈಗೊಳ್ಳಲಾಗುವುದು.

ನಂತರ ಸಮಗ್ರ ವರದಿಯನ್ನು ಮುಖ್ಯಮಂತ್ರಿಗಳಿಗೆ ನೀಡಿ ಕೃಷಿ ಇಲಾಖೆಯಲ್ಲಿ ಸಮಗ್ರ ಬದಲಾವಣೆ ತರಲಾಗುವುದು ಎಂದು ಹೇಳಿದರು. ಪ್ರತಿ ತಿಂಗಳು 2 ಜಿಲ್ಲೆಯಲ್ಲಿ ಬೆಳಿಗ್ಗೆ 7–00 ಗಂಟೆಗೆ ಕಾರ್ಯಕ್ರಮವು ನಡೆಯುತ್ತದೆ.

ಭತ್ತದ ಬೆಳೆಗೆ ವೈಜ್ಞಾನಿಕವಾಗಿ ಯೂರಿಯಾ ಗೊಬ್ಬ ರವನ್ನು ಮೇಲು ಗೊಬ್ಬರವಾಗಿ ನೀಡುವ ಪ್ರಾತ್ಯಕ್ಷಿಕೆ ತೋರಿಸುವುದು. ರಾಗಿ ಬಿತ್ತನೆಯಲ್ಲಿ ಭಾಗವಹಿಸುವುದು ಹಾಗೂ ಈಗಾಗಲೇ ಬಿತ್ತನೆಯಾದ ರಾಗಿ ಕ್ಷೇತ್ರದಲ್ಲಿ ಎಡೆಗುಂಟೆ ಹೊಡೆಯುವ ರೈತರೊಂದಿಗೆ ಭಾಗಿಯಾಗುವುದು.

‘ಡಯಂಚ’ ಹಸಿರೆಲೆ ಗೊಬ್ಬರವನ್ನು ಟ್ರಾಕ್ಟರ್ ಚಾಲಿತ ರೋಟೋವೇಟರ್ ನಿಂದ ಮಣ್ಣಿನಲ್ಲಿ ಬೆರೆಸುವ ಪ್ರಾತ್ಯಕ್ಷಿಕೆ ತೋರಿಸುವುದು. ಕಬ್ಬಿನ ರವದಿ ಸುಡುವ ಬದಲಾಗಿ ಜೈವಿಕ ಗೊಬ್ಬರ ಬಳಸಿ ಕಬ್ಬಿನಲ್ಲಿ ತರಗು ನಿರ್ವಹಣೆ ಮಾಡುವುದು ಹಾಗೂ ಸ್ಥಳದಲ್ಲಿಯೇ ಕಬ್ಬಿನ ರವದಿ ಕೊಳೆಯುವಂತೆ ಮಾಡುವ ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸುವುದು. ರಾಜ್ಯ ಪ್ರಶಸ್ತಿ ಪುರಸ್ಕೃತ ಪ್ರಗತಿಪರ ರೈತ ಮಹಿಳೆ ಶ್ರೀಮತಿ ಕವಿತಾ ಮಿಶ್ರ ಇವರಿಂದ ಶ್ರೀಗಂಧ ಬೆಳೆ ಕುರಿತು ಹಾಗೂ ಅವರ ಕೃಷಿ ಅನುಭವವನ್ನು ರೈತರೊಂದಿಗೆ ಹಂಚಿಕೊಳ್ಳುವುದು. ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿಯ ರೈತರೊಂದಿಗೆ ಗೂಗಲ್ ಮೀಟ್ ನಡೆಸಿ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಚರ್ಚಿಸುವುದು.

ರೈತರಿಗೆ ತಾತ್ಕಾಲಿಕ ಸಮಸ್ಯೆಗಳಿಗೆ ಪರಿಹಾರ ನೀಡುವುದಕ್ಕಿಂತ ಶಾಶ್ವತ ಪರಿಹಾರ ನೀಡಬೇಕು. ಎಲ್ಲಾ ಜಿಲ್ಲೆಗಳನ್ನು ಸುತ್ತಿ ರೈತರ ಸಮಸ್ಯೆಯನ್ನು ಅರಿಯಲು ಸಹಾಯವಾಗುತ್ತದೆ ಎಂದು ತಿಳಿಸಿದರು.

## ಮೌಖಿಕ ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ಅರ್ಹತಾ ಪಟ್ಟಿ ಪ್ರಕಟ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ):

ಕರ್ನಾಟಕ ಲೋಕಸೇವಾ ಆಯೋಗವು 2020 ರ ಆಗಸ್ಟ್/ಸೆಪ್ಟೆಂಬರ್ ತಿಂಗಳಲ್ಲಿ ನಡೆಸಿದ 2020 ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳ ಕನ್ನಡ ಭಾಷಾ ವಿಷಯದ ಮೌಖಿಕ ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ “http://kpsc.kar.nic.in ನಲ್ಲಿ ಪ್ರಕಟಿಸಿದೆ.

ಸದರಿ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನವನ್ನು ದಿನಾಂಕ 23-11-2020 ಹಾಗೂ 24-11-2020 ರಂದು ಬೆಳಗಾವಿ ಮತ್ತು ಕಲಬುರ್ಗಿ ಕೇಂದ್ರಗಳಲ್ಲಿ ಹಾಗೂ ದಿನಾಂಕ 23-11-2020 ರಂದು ಮೈಸೂರು ಮತ್ತು ಶಿವಮೊಗ್ಗ ಕೇಂದ್ರಗಳಲ್ಲಿ ನಡೆಸಲಿದೆ. ಸಂದರ್ಶನ ನಡೆಸಲಾಗುವ ದಿನಾಂಕ, ಸಮಯ ಮತ್ತು ಸ್ಥಳವನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಮೌಖಿಕ ಸಂದರ್ಶನದ ಸೂಚನಾ ಪತ್ರಗಳನ್ನು ದಿನಾಂಕ 13-11-2020 ರಿಂದ ಕೆ.ಪಿ.ಎಸ್.ಸಿ. ವೆಬ್‌ಸೈಟ್ http://kpsc.kar.nic.in ನ ಹೋಂ ಪೇಜ್‌ನಲ್ಲಿ

**Departmental Examination 2020-I Session** ಮೇಲೆ ಕ್ಲಿಕ್ ಮಾಡಿ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಹಾಗೆಯೇ **Verify button** ಅನ್ನು ಕ್ಲಿಕ್ ಮಾಡಿದ ನಂತರ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಅದರಲ್ಲಿ ನಮೂದಾಗುವ ಓ.ಟಿ.ಪಿ ಸಂಖ್ಯೆಯನ್ನು ನಮೂದಿಸಬೇಕು. ನಂತರ ಪುನ : **Verify** ಓ.ಟಿ.ಪಿ. ಬಟನ್ ಅನ್ನು ಕ್ಲಿಕ್ ಮಾಡಬೇಕು. ತದನಂತರ ಡೌನ್‌ಲೋಡ್ ಬಟನ್ ಅನ್ನು ಕ್ಲಿಕ್ ಮಾಡಿ ಸೂಚನಾ ಪತ್ರವನ್ನು ಮುದ್ರಿಸಿಕೊಳ್ಳಲು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಾರ್ವಜನಿಕ ಜಾಗೃತಿ ಜಾಥಾ ಮತ್ತು ಹಸಿರು ದೀಪಾವಳಿ ಆಚರಣೆ

ಬೆಂಗಳೂರು, ನವೆಂಬರ್ 12 (ಕರ್ನಾಟಕ ವಾರ್ತೆ): ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ದೀಪಾವಳಿ ಹಬ್ಬದಲ್ಲಿ ಉಂಟಾಗುವ ಅಗ್ನಿ ಅವಘಡಗಳನ್ನು ತಡೆಯುವ ನಿಟ್ಟಿನಲ್ಲಿ ಹಮ್ಮಿಕೊಂಡಿದ್ದ " ಸಾರ್ವಜನಿಕ ಜಾಗೃತಿ ಜಾಥಾ 2020"ಕ್ಕೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಚಾಲನೆ ನೀಡಿದರು.

ಇಂದು ವಿಧಾನಸೌಧ ಮುಂಬಾಗದ ಮೆಟ್ಟಿಲುಗಳ ಮೇಲೆ ಹಮ್ಮಿಕೊಂಡಿದ್ದ ಸರಳ ಸಮಾರಂಭದಲ್ಲಿ ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ರಾಜ್ಯ ಸರ್ಕಾರ ಘೋಷಿಸಿರುವ 'ಹಸಿರು ಪಟಾಕಿ' ಅಭಿಯಾನ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ದ್ವಿಚಕ್ರ ವಾಹನ, ನಾಲ್ಕು ಚಕ್ರ ವಾಹನ, ಅಗ್ನಿಶ್ಯಾಮಕ ವಾಹನಗಳ ಜೊತೆಯಲ್ಲಿ ಪಥಸಂಚಲನವನ್ನು ಹಮ್ಮಿಕೊಳ್ಳಲಾಗಿದ್ದು, ಕಾಲ್ನಡಿಗೆಯಲ್ಲಿ ಬೆಂಗಳೂರಿನ ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ನ್ಯಾಷನಲ್ ಕಾಲೇಜ್ ಆವರಣದಲ್ಲಿ ಮುಕ್ತಾಯಗೊಳ್ಳಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಇತ್ತೀಚಿಗೆ ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ನಡೆದ ರಾಸಾಯನಿಕ ಫ್ಯಾಕ್ಟರಿ ಬೆಂಕಿ ಅವಘಡದಲ್ಲಿ ಶೌರ್ಯ ಮೆರೆದ ಅಗ್ನಿಶ್ಯಾಮಕ ದಳದ ಅಧಿಕಾರಿ/ಸಿಬ್ಬಂದಿಗಳಿಗೆ ಗೃಹ ಸಚಿವರು ಪ್ರಮಾಣ ಪತ್ರ ನೀಡಿ ಗೌರವಿಸಿದರು. ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಶುಭ ಸಂದೇಶವನ್ನು ಕಳುಹಿಸಿದ್ದರು.

ಮುಖ್ಯಮಂತ್ರಿಗಳ ಸಂದೇಶ:

ಪಟಾಕಿ ವಿರುದ್ಧ ಸಮರ ಸಾರಿದ್ದು, ಇದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಜೊತೆಗೆ ಪರಿಸರ ಸ್ನೇಹಿ ದೀಪಾವಳಿ ಆಚರಣೆಯ ಅಭಿಯಾನ ಪ್ರಾರಂಭಿಸಿ, ಅತ್ಯಂತ ಸುರಕ್ಷಿತವಾಗಿ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಲಿದೆ ಮತ್ತು ಪಟಾಕಿಗಳನ್ನು ಸಿಡಿಸುವುದರರಿಂದ ಉಂಟಾಗುವ ಅಗ್ನಿ ಅವಘಡಗಳನ್ನು ಯಶಸ್ವಿಯಾಗಿ ತಡೆಗಟ್ಟಿ ಸಾರ್ವಜನಿಕರಲ್ಲಿ ಇವುಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಉದ್ದೇಶದಿಂದ ಈ " ಸಾರ್ವಜನಿಕ ಜಾಗೃತಿ ಜಾಥಾ 2020" ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಪ್ರಸಕ್ತ ವರ್ಷದಲ್ಲಿ ದೇಶದಾದ್ಯಂತ ವ್ಯಾಪಕವಾಗಿ ಹರಡುತ್ತಿರುವ ಸಾಂಕ್ರಾಮಿಕ ರೋಗವನ್ನು ಯಶಸ್ವಿಯಾಗಿ ತಡೆಗಟ್ಟುವುದು ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಹಾಗೆಯೇ ನಮ್ಮ ರಾಜ್ಯದಲ್ಲಿಯೂ ಸಹ ಈಗ ನಾವೆಲ್ಲರೂ ಸೇರಿ, ಈ ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟಿ ಸಾರ್ವಜನಿಕರ ಪ್ರಾಣವನ್ನು ರಕ್ಷಿಸುವುದು ನಮ್ಮೆಲ್ಲರ ಪ್ರಮುಖ ಕರ್ತವ್ಯವಾಗಿದೆ. ಸಾರ್ವಜನಿಕರು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು ಅತಿ ಮುಖ್ಯವಾಗಿದೆ.

ಪ್ರತಿ ವರ್ಷ ದೀಪಾವಳಿಯ ಹಬ್ಬದಲ್ಲಿ ಬಹುತೇಕ ಚಿಕ್ಕ ಮಕ್ಕಳು ತಮಗರಿವಿಲ್ಲದಂತೆ ಪಟಾಕಿಗಳನ್ನು ಸಿಡಿಸುತ್ತಿರುವುದರಿಂದ ತಮ್ಮ ಅಮೂಲವ್ಯವಾದ ಕಣ್ಣುಗಳನ್ನು ಕಳೆದುಕೊಳ್ಳುತ್ತಿರುವ ಪ್ರಕರಣಗಳನ್ನು ಹೆಚ್ಚಾಗಿ ಕಾಣುತ್ತಿದ್ದೇವೆ.

ದೀಪಾವಳಿ ಸಂದರ್ಭದಲ್ಲಿ ಪಟಾಕಿಗಳನ್ನು ಸಿಡಿಸುವುದರಿಂದ ಅಗ್ನಿ ಅವಘಢಗಳನ್ನು ತಡೆಗಟ್ಟುವ ಜವಾಬ್ದಾರಿ ನಮ್ಮೆಲ್ಲರ ಮೇಲಿದ್ದು, ಸಾಂಪ್ರಾದಾಯಿಕ ದೀಪಗಳನ್ನು ಬೆಳಗುವ ಮೂಲಕ ಹಾಗೂ ಪರಿಸರ ಸ್ನೇಹಿ ಹಸಿರು ಪಟಾಕಿಗಳನ್ನು ಸಿಡಿಸುವ ಮೂಲಕ ಹಬ್ಬವನ್ನು ಆಚರಿಸಬೇಕು.

ಸಾರ್ವಜನಿಕರು ಪಟಾಕಿಗಳನ್ನು ಬೇಜವಾಬ್ದಾರಿತನದಿಂದ ಸಿಡಿಸುತ್ತಿರುವುದರಿಂದ ರಾಜ್ಯದಲ್ಲಿ ಪ್ರತೀ ವರ್ಷ ಸುಮಾರು 100 ರಿಂದ 150ರ ವರೆಗೆ ಅಗ್ನಿ ಅವಘಡಗಳು ಸಂಭವಿಸಿ, ಸಾರ್ವಜನಿಕರ ಆಸ್ತಿ-ಪಾಸ್ತಿ ನಷ್ಟವಾಗುತ್ತಿರುವ ಪ್ರಯುಕ್ತ ಈ ಅಗ್ನಿ ಅವಘಡಗಳನ್ನು ಯಶಸ್ವಿಯಾಗಿ ತಡೆಗಟ್ಟುವ ನಿಟ್ಟಿನಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು (12*7) ಗಂಟೆಗಳ ಕಾಲವು ಸ್ಪಂದಿಸಿ ಸಾರ್ವಜನಿಕರ ಆಸ್ತಿ-ಪಾಸ್ತಿ ರಕ್ಷಿಸುವಲ್ಲಿ ಸದಾ ಸನ್ನದವಾಗಿರುತ್ತದೆ.

ವಿಜ್ಞಾನಿಗಳ ಪ್ರಕಾರ ಸಾಂಪ್ರದಾಯಿಕ ಪಟಾಕಿಗಳಿಗೆ ಹೋಲಿಸಿದರೆ ಹಸಿರು ಪಟಾಕಿಗಳು ಸಣ್ಣ ಶೆಲ್ ಗಾತ್ರವನ್ನು ಹೊಂದಿರುತ್ತದೆ ಮತ್ತು ಕಡಿಮೆ ಹಾನಿಕಾರಕ ಕಚ್ಚಾ ವಸ್ತುಗಳನ್ನು ಬಳಸಿ,

ಉತ್ಪಾದಿಸಲ್ಪಟುತ್ತವೆ ಮತ್ತು ಧೂಳನ್ನು ಹೊರಸೂಸುವಿಕೆಯನ್ನು ನಿಗ್ರಹಿಸುವ ಸೇರ್ಪಡೆಗಳನ್ನು ಹೊಂದಿವೆ.

ಹಸಿರು ಪಟಾಕಿಗಳಲ್ಲಿ ಲಿಥೀಯಂ, ಆರ್ಸೆನಿಕ್, ಬೇರಿಯಂ, ಸೀಸ ಮುಂತಾದ ನಿಷೇಧಿತ ರಾಸಾಯನಿಕಗಳು ಇರುವುದಿಲ್ಲ.

ಹಸಿರು ಪಟಾಕಿಗಳು ಸುರಕ್ಷಿತ ನೀರನ್ನು ಬಿಡುಗಡೆ ಮಾಡುತ್ತವೆ. ಸುರಕ್ಷಿತ ಥರ್ಮೈಟ್ ಪಟಾಕಿಗಳು ಮತ್ತು ಸುರಕ್ಷಿತ ಕನಿಷ್ಠ ಅಲ್ಯೂಮಿಯಂ ಪಟಾಕಿಗಳೆಂದು ಕರೆಯಲಾಗುತ್ತೆ. ಇವುಗಳು ನೀರಿನ ಆವಿ ಬಿಡುಗಡೆ ಮಾಡಿ ಧೂಳಿನ ಕಣಗಳು ಏರಲು ಬಿಡುವುದಿಲ್ಲ.

ಈ ಪಟಾಕಿಗಳನ್ನು 30% ಕಣಗಳ ಮಾಲಿನ್ಯವನ್ನು ಕಡಿಮೆ ಮಾಡುವಂತೆ ವಿನ್ಯಾಸಗೊಳಿಸಲಾಗಿದೆ.

ಕಳೆದ ವರ್ಷ ದೀಪಾವಳಿಯ ಸಂದರ್ಭದಲ್ಲಿ 10 ವರ್ಷಕ್ಕಿಂತ ಚಿಕ್ಕ ವಯಸ್ಸಿನ ಸುಮಾರು 20 ಮಕ್ಕಳ ಕಣ್ಣುಗಳಿಗೆ ಹಾನಿ ಉಂಟಾಗಿದ್ದು ಮತ್ತು ದೇಶಾದ್ಯಂತ 7 ಜನರು ಪ್ರಾಣ ಕಳೆದುಕೊಂಡಿರುತ್ತಾರೆ. 2018 ದೀಪಾವಳಿ ಸಮಯದಲ್ಲಿ ರಾಜ್ಯದಲ್ಲಿಲ 129 ಅಗ್ನಿ ಕರೆಗಳು ಸಂಭವಿಸಿರುತ್ತವೆ. ಪಟಾಕಿಗಳ ಬಳಕೆಯಿಂದ ಉಂಟಾಗುವ ಅಗ್ನಿ ಅವಘಡಗಳನ್ನು ಯಶಸ್ವಿಯಾಗಿ ತಡೆಗಟ್ಟು ನಿಟ್ಟಿನಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು 24 ಗಂಟೆಗಳ ಕಾಲವು ಸದಾ ಸನ್ನದ್ಧವಾಗಿರುತ್ತದೆ. ಯಾವುದೇ ಶಬ್ದವನ್ನು ಉಂಟು ಮಾಡುವುದಿಲ್ಲ ಎಂದು ಪರಿಗಣಿಸಲ್ಪಡುವ ಸಣ್ಣ ಪಟಾಕಿಗಳು, ಹೂವಿನ ಕುಂಡಗಳು ಸಹ ದಟ್ಟವಾದ ಹೊಗೆಯನ್ನು ಉಂಟು ಮಾಡುತ್ತವೆ. ಪಟಾಕಿಗಳಲ್ಲಿ ವಿಷಕಾರಕ ಅಂಶ ಇರುವುದರಿಂದಾಗಿ ಚಿಕ್ಕಮಕ್ಕಳ ಹಾಗೂ ವಯೋವೃದ್ಧರ ಉಸಿರಾಟದ ಮೇಲೆ ಪರಿಣಾಮ ಬೀರುತ್ತದೆ. ಪಟಾಕಿಗಳಲ್ಲಿ ಹೊರಸೂಸುವ ನೈಟ್ರಸ್ ಆಕ್ಸೈಡ್ ಹಾಗೂ ಸಲ್ಫರ್ ಡೈ ಆಕ್ಸೈಡ್‌ನಿಂದಾಗಿ ವಾತಾವರಣದಲ್ಲಿ ಮಾಲಿನ್ಯದ ಮಟ್ಟ ಹೆಚ್ಚಳವಾಗಲಿದೆ. ಕಣ್ಣು ಕಿವಿಗೆ ಹಾನಿಯಾಗುವ ಸಾಧ್ಯತೆಯಿರುತ್ತದೆ. ಪಟಾಕಿ ಬಳಕೆಯಿಂದ ಉಸಿರಾಟಕ್ಕೆ ಸಮಸ್ಯೆ, ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳಿಂದ ಮತ್ತು ನರಗಳಿಗೆ ಸಂಬಂಧಿಸಿದ ತೊಂದರೆಯಿಂದ ಬಳಲುತ್ತಿರುವ ಮೇಲೆ ಗಂಭೀರವಾದ ಪರಿಣಾಮ ಬೀರುತ್ತದೆ. ಪಟಾಕಿಗಳು ಹೊರಸೂಸುವ ವಿಷಕಾರಿ ಅನಿಲವನ್ನು ಗರ್ಭಿಣಿಯರು ಸೇವಿಸಿದರೆ ತಾಯಿ ಹಾಗೂ ಹುಟ್ಟುವ ಮಗುವಿಗೂ ತೊಂದರೆಯಾಗುತ್ತದೆ ಮತ್ತು ಹುಟ್ಟುತ್ತಲೆ ಮಗುವಿಗೆ ಉಸಿರಾಟಕ್ಕೆ ತೊಂದರೆ ಉಂಟಾಗಬಹುದು.

ಸಾರ್ವಜನಿಕರು ಈ ವರ್ಷದ ದೀಪಾವಳಿಯಂದು ಪರಿಸರ ಸ್ನೇಹಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಿ, ಹಬ್ಬವನ್ನು ಆಚರಿಸಬೇಕೆಂದು ಈ ಜಾಥಾದ ಮುಖಾಂತರ ಮನವಿ ಮಾಡಿದೆ.